# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 84 |
| ಸದಸ್ಯರ ಹೆಸರು | : | ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2022 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಎಷ್ಟು ಶಾಲೆಗಳಿಗೆ ಮೂಲಭೂತ ಸೌಕರ್ಯಗಳಾದ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. | ರಾಜ್ಯದಲ್ಲಿ ಒಟ್ಟು 47058 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿವೆ. ಇದರಲ್ಲಿ 46384 ಶಾಲೆಗಳಿಗೆ ಶೌಚಾಲಯ ಸೌಲಭ್ಯ ಮತ್ತು 46597 ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ.<br>ವಿವರವಾದ ಮಾಹಿತಿಯನ್ನು **ಅನುಬಂಧ–01**ರಲ್ಲಿ ಲಗತ್ತಿಸಿದೆ. |
| ಆ) | ಅವುಗಳ ಸುಸ್ಥಿತಿಯ ಹಾಗೂ ನಿರ್ವಹಣೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; ಇನ್ನೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದಿರುವ ಶಾಲೆಗಳ ಸಂಖ್ಯೆ ಎಷ್ಟು; | **ಸರ್ಕಾರವು ಈ ಕೆಳಕಂಡ ಕ್ರಮ ಕೈಗೊಂಡಿದೆ.**<br>• 2020–21 ಮತ್ತು 2021–22 ಸಾಲಿಗೆ ರಾಜ್ಯ ವಲಯ ಹಾಗೂ ನರೇಗಾ ಅನುದಾನ ಒಗ್ಗೂಡಿಸುವಿಕೆಯ ಮೂಲಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಕ್ರಮವಾಗಿ ರೂ.2920.00, 3500.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br>• 2022–23ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ರೂ.23450.00ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.<br>• 2020–21, 2021–22 ಮತ್ತು 2022–23ನೇ ಸಾಲಿನಲ್ಲಿ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಕುಡಿಯುವ ನೀರು, ಶೌಚಾಲಯಗಳ ನಿರ್ವಹಣೆಗಾಗಿ ಕ್ರಮವಾಗಿ ರೂ.2999.80, 2500.00, 3500.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.<br>(ವಿವರವನ್ನು **ಅನುಬಂಧ–02**ರಲ್ಲಿ ಲಗತ್ತಿಸಿದೆ)<br>2019–20 ರಿಂದ 2022–23ರ ಸಾಲಿನವರೆಗೆ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಸರ್ಕಾರಿ |

| | | |
|---|---|---|
| | | ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ದುರಸ್ಥಿಗೆ ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡಿರುವ ವಿವರವನ್ನು **ಅನುಬಂಧ-03**ರಲ್ಲಿ ಲಗತ್ತಿಸಿದೆ.<br>2022-23ನೇ ಸಾಲಿನಲ್ಲಿ ಶಾಲಾ ಕಾಲೇಜುಗಳ ದುರಸ್ಥಿ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ರೂ.100.00ಕೋಟಿಗಳ ಅನುದಾನ ಒದಗಿಸಲು ಕ್ರಮವಹಿಸಲಾಗಿದೆ.<br>ಮುಂದುವರೆದು, ಮಹಾತ್ಮಾ ಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ಶಾಲೆಗಳಿಗೆ ಕಟ್ಟಡ ನಿರ್ಮಾಣ/ದುರಸ್ಥಿಯನ್ನೊಳಗೊಂಡಂತೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು 14 ಮತ್ತು 15ನೇ ಹಣಕಾಸು ಆಯೋಗದಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕ್ರಮವಹಿಸಲು ಸುತ್ತೋಲೆ ಸಂಖ್ಯೆ: ಗ್ರಾಅಪಂರಾ 435 ಜಿ.ಪ.ಸ 2021, ದಿನಾಂಕ:08.11.2021ರ ಮೂಲಕ ಸುತ್ತೋಲೆ ಹೊರಡಿಸಲಾಗಿದ್ದು, ಅಗತ್ಯ ಕ್ರಮವಹಿಸುವಂತೆ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ.<br><br>ರಾಜ್ಯದಲ್ಲಿ ಒಟ್ಟು 603 ಪ್ರಾಥಮಿಕ ಮತ್ತು 71 ಪ್ರೌಢ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇರುವುದಿಲ್ಲ ಮತ್ತು 400 ಪ್ರಾಥಮಿಕ ಮತ್ತು 61 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-01**ರಲ್ಲಿ ಲಗತ್ತಿಸಿದೆ.<br>ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆಯನ್ನು ಆಧರಿಸಿ ಸರ್ಕಾರಿ ಶಾಲೆಗಳಿಗೆ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ವ್ಯವಸ್ಥೆಯನ್ನು ಅವಶ್ಯಕತೆಯಿರುವ ಕಡೆ ಆದ್ಯತೆಯ ಮೇರೆಗೆ ಹಂತ ಹಂತವಾಗಿ ಕಾಮಗಾರಿ ಕೈಗೊಳ್ಳಲು ಕ್ರಮ ವಹಿಸಲಾಗಿದೆ. |
| ಇ) | ರಾಜ್ಯದಲ್ಲಿ ಹಲವಾರು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಯಾವುದೇ ಸಮಯದಲ್ಲಿ ಬೀಳುವ ಸಂದರ್ಭಗಳಿದ್ದು ವಿದ್ಯಾರ್ಥಿಗಳ ಜೀವಕ್ಕೆ ತೊಂದರೆಯಾಗುತ್ತಿರುವುದರಿಂದ ಇಂತಹ ಶಾಲಾ ಕಟ್ಟಡಗಳ ದುರಸ್ಥಿಗೆ | 2019-20 ರಿಂದ 2022-23 ರ ಸಾಲಿನವರೆಗೆ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಸರ್ಕಾರಿ ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ದುರಸ್ಥಿಗೆ ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡಿರುವ ವಿವರ **ಅನುಬಂಧ-03**ರಲ್ಲಿ ಲಗತ್ತಿಸಿದೆ.<br>2022-23ನೇ ಸಾಲಿನಲ್ಲಿ ಮಳೆಯಿಂದಾಗಿ ಶಿಥಿಲಗೊಂಡ ಶಾಲಾ ಕಾಲೇಜುಗಳ ತುರ್ತು ದುರಸ್ಥಿ |

| | | |
|---|---|---|
| | ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ರೂ.100.00ಕೋಟಿಗಳ ಅನುದಾನ ಒದಗಿಸಲು ಕ್ರಮವಹಿಸಲಾಗಿದೆ.<br>ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ರಾಜ್ಯದಾದ್ಯಂತ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. |

**ಇಪಿ: 346 ಯೋಸಕ 2022**

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

Lacq - 84

## ಅನುಬಂಧ - 01

| ಜಿಲ್ಲೆಯ ಹೆಸರು | ಒಟ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಶೌಚಾಲಯ ವ್ಯವಸ್ಥೆ ಇರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ವ್ಯವಸ್ಥೆ ಇರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಒಟ್ಟು ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ | ಶೌಚಾಲಯ ವ್ಯವಸ್ಥೆ ಇರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ವ್ಯವಸ್ಥೆ ಇರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ | ಶೌಚಾಲಯ ವ್ಯವಸ್ಥೆ ಇಲ್ಲದಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಶೌಚಾಲಯ ವ್ಯವಸ್ಥೆ ಇಲ್ಲದಿರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ |
|---|---|---|---|---|---|---|---|---|---|---|
| BAGALKOT | 1243 | 1233 | 1237 | 189 | 188 | 189 | 10 | 6 | 1 | 0 |
| BALLARI | 552 | 541 | 544 | 115 | 115 | 115 | 11 | 8 | 0 | 0 |
| BELAGAVI | 1356 | 1337 | 1353 | 137 | 137 | 137 | 19 | 3 | 0 | 0 |
| BELAGAVI CHIKKODI | 1728 | 1712 | 1720 | 193 | 193 | 193 | 16 | 8 | 0 | 0 |
| BENGALURU RURAL | 1058 | 1053 | 1056 | 64 | 64 | 64 | 5 | 2 | 0 | 0 |
| BENGALURU U NORTH | 479 | 474 | 468 | 58 | 55 | 54 | 5 | 11 | 3 | 4 |
| BENGALURU U SOUTH | 844 | 769 | 768 | 89 | 74 | 74 | 75 | 76 | 15 | 15 |
| BIDAR | 1218 | 1203 | 1201 | 167 | 166 | 166 | 15 | 17 | 1 | 1 |
| CHAMARAJANAGARA | 738 | 737 | 736 | 86 | 86 | 86 | 1 | 2 | 0 | 0 |
| CHIKKABALLAPURA | 1415 | 1410 | 1412 | 111 | 111 | 111 | 5 | 3 | 0 | 0 |
| CHIKKAMANGALURU | 1304 | 1299 | 1303 | 116 | 116 | 114 | 5 | 1 | 0 | 2 |
| CHITRADURGA | 1630 | 1608 | 1625 | 115 | 114 | 114 | 22 | 5 | 1 | 1 |
| DAKSHINA KANNADA | 896 | 896 | 896 | 170 | 170 | 170 | 0 | 0 | 0 | 0 |
| DAVANAGERE | 1067 | 1061 | 1063 | 134 | 133 | 134 | 6 | 4 | 1 | 0 |
| DHARWAD | 738 | 728 | 736 | 109 | 108 | 107 | 10 | 2 | 1 | 2 |
| GADAG | 583 | 577 | 582 | 115 | 114 | 115 | 6 | 1 | 1 | 0 |
| HASSAN | 2184 | 2184 | 2184 | 241 | 239 | 241 | 0 | 0 | 2 | 0 |
| HAVERI | 1133 | 1119 | 1128 | 151 | 150 | 148 | 14 | 5 | 1 | 3 |
| KALBURGI | 1703 | 1578 | 1652 | 295 | 289 | 292 | 125 | 51 | 6 | 3 |
| KODAGU | 372 | 371 | 371 | 47 | 47 | 47 | 1 | 1 | 0 | 0 |
| KOLAR | 1773 | 1756 | 1765 | 125 | 124 | 123 | 17 | 8 | 1 | 2 |
| KOPPAL | 915 | 900 | 903 | 168 | 164 | 167 | 15 | 12 | 4 | 1 |
| MANDYA | 1559 | 1557 | 1555 | 215 | 215 | 215 | 2 | 4 | 0 | 0 |
| MYSURU | 1843 | 1843 | 1840 | 232 | 232 | 232 | 0 | 3 | 0 | 0 |
| RAICHUR | 1382 | 1330 | 1327 | 224 | 211 | 210 | 52 | 55 | 13 | 14 |
| RAMANAGARA | 1199 | 1199 | 1199 | 107 | 106 | 107 | 0 | 0 | 1 | 0 |
| SHIVAMOGGA | 1818 | 1814 | 1817 | 164 | 164 | 164 | 4 | 1 | 0 | 0 |
| TUMAKURU | 1993 | 1984 | 1984 | 132 | 132 | 130 | 9 | 9 | 0 | 2 |
| TUMAKURU MADHUGIRI | 1242 | 1232 | 1237 | 95 | 92 | 94 | 10 | 5 | 3 | 1 |
| UDUPI | 575 | 572 | 574 | 106 | 106 | 106 | 3 | 1 | 0 | 0 |
| UTTARA KANNADA | 926 | 925 | 925 | 49 | 49 | 49 | 1 | 1 | 0 | 0 |
| UTTARA KANNADA SIRSI | 1101 | 1101 | 1098 | 75 | 75 | 75 | 0 | 3 | 0 | 0 |
| VIJAYANAGARA | 977 | 953 | 963 | 130 | 128 | 128 | 24 | 14 | 2 | 2 |
| VIJAYAPURA | 1796 | 1741 | 1745 | 158 | 150 | 152 | 55 | 51 | 8 | 6 |
| YADAGIRI | 899 | 839 | 872 | 137 | 131 | 135 | 60 | 27 | 6 | 2 |
| **Total** | **42239** | **41636** | **41839** | **4819** | **4748** | **4758** | **603** | **400** | **71** | **61** |

7/12/20[illegible]

## ಅನುಬಂಧ – 02

**2020–21 ರಿಂದ 2022–23 ರ ಸಾಲಿನ ವರೆಗೆ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಕುಡಿಯುವ ನೀರು, ಶೌಚಾಲಯಗಳ ನಿರ್ವಹಣೆಗಾಗಿ ಪ್ರತಿ ಸರ್ಕಾರಿ ಶಾಲೆಗೆ ಅನುದಾನ ಬಿಡುಗಡೆ ಮಾಡಿರುವ ವಿವರ ಈ ಕೆಳಕಂಡಂತಿದೆ:-**

**2020–21**

| ಶಾಲೆಗಳ ವಿವರ | ಘಟಕ ವೆಚ್ಚ (ರೂ.ಗಳಲ್ಲಿ) | ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ) |
|---|---|---|
| ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು | 5400/– | 1122.93 |
| ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು | 6790/– | 1527.07 |
| ಸರ್ಕಾರಿ ಪ್ರೌಢ ಶಾಲೆಗಳು | 7400/– | 349.80 |
| ಒಟ್ಟು | -- | **2999.80** |

**2021–22**

| ಶಾಲೆಗಳ ವಿವರ | ಘಟಕ ವೆಚ್ಚ (ರೂ.ಗಳಲ್ಲಿ) | ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ) |
|---|---|---|
| ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು | 4650/– | 967.00 |
| ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು | 5400/– | 1214.00 |
| ಸರ್ಕಾರಿ ಪ್ರೌಢ ಶಾಲೆಗಳು | 6750/– | 319.00 |
| **ಒಟ್ಟು** | --- | **2500.00** |

**2022–23**

| ಶಾಲೆಗಳ ವಿವರ | ಘಟಕ ವೆಚ್ಚ (ರೂ.ಗಳಲ್ಲಿ) | ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ) |
|---|---|---|
| ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು | 6350/– | |
| ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು | 8000/– | 3500.00 |
| ಸರ್ಕಾರಿ ಪ್ರೌಢ ಶಾಲೆಗಳು | 9000/– | |
| ಒಟ್ಟು | --- | |

12/12/2022
ಉಪ ನಿರ್ದೇಶಕರು (ಯೋಜನೆ)
[illegible]
[illegible] ಬೆಂಗಳೂರು-1

LAQ - 34

# ಅನುಬಂಧ – 03

- **2019–20 ರಿಂದ 2022–23 ರ ಸಾಲಿನವರೆಗೆ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಸರ್ಕಾರಿ ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ದುರಸ್ಥಿಗೆ ಅನುದಾನ ಬಿಡುಗಡೆ ಮಾಡಿರುವ ವಿವರ ಈ ಕೆಳಕಂಡಂತಿದೆ:**

## ಪ್ರಾಥಮಿಕ ಶಾಲೆ

| ನಿರ್ಮಾಣ | | |
|---|---|---|
| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) |
| 1 | 2019-20 | 6500.00 |
| 2 | 2020-21 | 11000.00 |
| 3 | 2021-22 | - |
| 4 | 2022-23 | 2022-23ನೇ ಸಾಲಿನಲ್ಲಿ ವಿವೇಕಾ ಶಾಲಾ ಕೊಠಡಿ ಯೋಜನೆಯಡಿ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 5539 ಕೊಠಡಿ ನಿರ್ಮಾಣ ಮಾಡಲು ರೂ. 77000.00 ಲಕ್ಷಗಳ ಅನುದಾನ ಮಂಜೂರಾಗಿದ್ದು, ಕ್ರಮ ಕೈಗೊಂಡಿದೆ. |

| ದುರಸ್ಥಿ | | |
|---|---|---|
| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) |
| 1 | 2019-20 | 2103.00 |
| 2 | 2020-21 | 405.11 |
| 3 | 2021-22 | 1527.00 |
| 4 | 2022-23 | 4650.00 |

## ಪ್ರೌಢ ಶಾಲೆ

| ನಿರ್ಮಾಣ | | |
|---|---|---|
| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) |
| 1 | 2019-20 | 2500.00 |
| 2 | 2020-21 | 7000.00 |
| 3 | 2021-22 | - |
| 4 | 2022-23 | 2022-23ನೇ ಸಾಲಿನಲ್ಲಿ ವಿವೇಕಾ ಶಾಲಾ ಕೊಠಡಿ ಯೋಜನೆಯಡಿ ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಿಗೆ 1062 ಕೊಠಡಿ ನಿರ್ಮಾಣ ಮಾಡಲು ರೂ. 17400.00 ಲಕ್ಷಗಳ ಅನುದಾನ ಮಂಜೂರಾಗಿದ್ದು, ಕ್ರಮ ಕೈಗೊಂಡಿದೆ. |

| ದುರಸ್ಥಿ | | |
|---|---|---|
| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) |
| 1 | 2019-20 | 1578.00 |
| 2 | 2020-21 | 786.00 |
| 3 | 2021-22 | 467.80 |

12/12/2022
ಉಪ ನಿರ್ದೇಶಕರು (ಆಡಳಿತ)
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು-1